ಸಾಮಾನ್ಯವಾಗಿ ಪ್ರೀತಿ, ಅಂತಃಕರಣ, ಲೈಂಗಿಕತೆ, ಪೀಳಿಗೆ, ಮದುವೆ, ಸಹಜೀವನ ಒಟ್ಟಾರೆ ಪ್ಯಾಶನೇಟ್ ಆದ ಭಾವನೆಗಳನ್ನು ಉಲ್ಲೇಖಿಸಲು ಬಳಸಲಾಗುವ ಕೆಲವು ಪದಗಳ ಅರ್ಥದ ಬಗ್ಗೆ ಹೆಚ್ಚು ಪ್ರಾಮಾಣಿಕ, ಬಹುಶಃ ಹೆಚ್ಚು ಅಹಿತಕರ ಪ್ರಶ್ನೆಗಳನ್ನು ಕೇಳಲು ನಮ್ಮ ತಲೆಮಾರು ಕಲಿಯುತ್ತಿದೆ ಅಂತ ನನ್ನ ಅನಿಸಿಕೆ. ಇದಕ್ಕಾಗಿ ಇಡೀ ದೇಶವನ್ನು ಆವರಿಸುತ್ತಿರುವ ಹೊಸ ಚಿಂತನೆ ಮತ್ತು ಸಾಂಸ್ಕೃತಿಕ ಬದಲಾವಣೆಗಳಿಗೆ ಧನ್ಯವಾದ ಹೇಳಬೇಕು. ಒಂದೆಡೆ, ಯೋಚಿಸುವುದಕ್ಕೆ ಹೆಚ್ಚಿನ ಅವಕಾಶಗಳಿದ್ದು, ಆ ಕಾರಣವೇ ಕ್ರಿಯೆಗೆ ಇಳಿಯುವುದಕ್ಕೆ ಸಾಧ್ಯವಾಗಬಹುದಾದರೆ, ಅದು ಜನರ ವಿಕಾಸ ಮತ್ತು ಬೆಳವಣಿಗೆಯನ್ನು ನಿರ್ಧರಿಸುತ್ತದೆ. ಅಂತಹ ಜನರು ತಮ್ಮ ಬಯಕೆ ಮತ್ತು ಅಗತ್ಯಗಳ ಬಗ್ಗೆ ಹೆಚ್ಚು ತಿಳಿದಿರುತ್ತಾರೆ.ಇನ್ನೊಂದೆಡೆ, ಈ ವಿಷಯಕ್ಕೆ ಇನ್ನೊಂದು ಚಿಂತಾಜನಕ ಮುಖವೂ ಇದೆ. ಅದೇನೆಂದರೆ, ದೀರ್ಘಕಾಲ ಬಾಳುವ ಉತ್ಪಾದಕ ಸಂಬಂಧಗಳನ್ನು ಬೆಳೆಸಿಕೊಳ್ಳಲಾಗದ ಮತ್ತು ಕಾಯ್ದುಕೊಳ್ಳಲಾಗದ ಅಸಾಮರ್ಥ್ಯ. ಇದೊಂದು ಆತ್ಮಘಾತುಕ ಪ್ರವೃತ್ತಿಯಾಗಿ ಬೆಳೆಯುತ್ತಿದೆ. ಇಲ್ಲಿ ಬೇರೆಯವರನ್ನು ತನ್ನ ಮನೋರಂಜನೆ ಮತ್ತು ಕೊನೆಯಿಲ್ಲದ ಸ್ವರತಿಗೆ ಬೇಕಾದವರಾಗಿ ನೋಡಲಾಗುತ್ತದೆ. ಕಾರಣ ಭಿನ್ನ ಆಸಕ್ತಿ, ಅಭಿರುಚಿ ಹಾಗೂ ಸಂವೇದನೆಗಳನ್ನು ಗೌರವಿಸುವ ಮನೋಧರ್ಮ ಜಡ್ಡುಗಟ್ಟುತ್ತಿದೆ. ಹೆಚ್ಚಿನವರಿಗೆ, ಭಾವನಾತ್ಮಕ ಬದುಕಿನಲ್ಲಿ ಒಂದು ಸ್ಥಿರವಾದ ರೂಪವನ್ನು ಪಡೆಯುವುದು ಮತ್ತು ಸಮನ್ವಯ ಗೊಳಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಇದಕ್ಕೆ ಪರಿಹಾರವಾಗಿ ಬಹುಶಃ ಒಂದೇ ಒಂದು ಉಳಿದಿದೆ ಅದು ವಾತ್ಸಲ್ಯ. ಇಂಗ್ಲಿಷ್‌ನ affection ಎಂಬ ಈ ಪದದ ಮೂಲ ಲ್ಯಾಟಿನ್‌ನ affectus. ಅಂದರೆ 'That to which one is attached'. ಈ ಪದ ಇಂದು ನಮ್ಮ ಸಂವಾದ ಮತ್ತು ಕಥನಗಳಿಂದ ಬಹುತೇಕ ಕಾಣೆಯಾಗಿದೆ. ಈ ಪದವನ್ನು ಕೇವಲ ಡಿಕ್ಷನರಿ ಇಟ್ಟುಕೊಂಡು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಇದು ನಾವು ಅಲ್ಲಗಳೆಯಲಾಗದ ಮತ್ತು ಗ್ರಹಿಸಲಾಗದ ಪದ.

◆ **ನೀವು ಯಾವುದಾದರೂ ಕನಸಿನಲ್ಲಿ ಸಿಕ್ಕಿ ಹಾಕಿಕೊಂಡಿದ್ದೀರಾ? ಪದೇ ಪದೇ ನಿಮಗೆ ಬೀಳುವ ಯಾವುದಾದರೂ ಕನಸು ಇದ್ದರೆ ನೆನೆಪಿಸಿಕೊಳ್ಳಿ...**

ನನ್ನ ಕನಸುಗಳು ಯಾವಾಗಲೂ ಚಿತ್ರ- ವಿಚಿತ್ರ ಮತ್ತು ಚಂಡಮಾರುತದಂತೆ ಅನಿರೀಕ್ಷಿತ ಆಘಾತದವು. ಅವುಗಳನ್ನು ನೆನಪಿಸಿಕೊಳ್ಳುವುದೆಂದರೆ ಬಲು ಕಷ್ಟದ ಕೆಲಸ. ಮತ್ತದು ನನ್ನ ಭಾಷೆಯ ಸೋಲಾಗುತ್ತದೆ

◆ **ನಿಮಗೆ ಭಯ ಹುಟ್ಟಿಸುವ ಸಂಗತಿ ಯಾವುದು?**

ನಾನು ಬದುಕುತ್ತಿರುವ ಬದುಕಿನ ಬಗ್ಗೆ ನನಗೇನೂ ಗೊತ್ತೇ ಇಲ್ಲ. ನಾನು ನಿರಂತರವಾಗಿ ನನಗರಿವಿಲ್ಲದೆ ಏನನ್ನಾದರೂ ಕಳೆದುಕೊಳ್ಳುತ್ತಿದ್ದೇನೆ ಹಾಗೂ ನನಗಾಗಿ ಕಾಯುತ್ತಿರುವ ಸಾಹಿತ್ಯ ರೂಪ ಮತ್ತು ಜನರನ್ನು ನಾನು ನಿಜವಾಗಿಯೂ ತಲುಪುತ್ತಿಲ್ಲ ಎಂಬುದರ ಅರಿವು, ಮುಂದೊಂದು ದಿನ ನನಗಾದರೆ ಎಂಬುದು ನನ್ನ ಹುಚ್ಚು ಆತಂಕ. ಬಹುಶಃ ಅದಕ್ಕಾಗಿಯೇ ನಾನು ಈ ಪದ ಪ್ರಪಂಚದ ವಿಶಾಲವಾದ ಅರ್ಥದಲ್ಲಿ ನನ್ನನ್ನು Bulimic person ಎಂದು ಪರಿಗಣಿಸುತ್ತೇನೆ. ನಾನು ಏನನ್ನಾದರೂ, ಎಲ್ಲವನ್ನೂ ಕಡ್ಡಾಯವಾಗಿ, ಉತ್ಸಾಹದಿಂದ ಹುಡುಕುತ್ತೇನೆ ಮತ್ತು ಅನುಭವಿಸುತ್ತೇನೆ. ಈ ನಿರ್ದಿಷ್ಟ ಗುಣ ಮೈಗೂಡಿಸಿಕೊಳ್ಳುವುದಕ್ಕೆ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ ಅಂತ ನಿಮಗೆ ಗೊತ್ತಿರಬಹುದು.

◆ **ನಿಮಗೆ ಒಪ್ಪಿಗೆ ಇದ್ದರೆ ನಿಮ್ಮ ಜೀವನದ ಒಂದು ಸಿಹಿ ಮತ್ತು ಕಹಿ ನೆನಪುಗಳನ್ನು ಹಂಚಿಕೊಳ್ಳಬಹುದಾ?**

ಸಂಕೋಚ ಮತ್ತು ನಾಚಿಕೆಯಿಂದ, ಕೊನೆಯ ಈ ಪ್ರಶ್ನೆಗೆ ಉತ್ತರಿಸುವುದನ್ನು ನಾನು ನಿರಾಕರಿಸುತ್ತೇನೆ. ಬರಹಗಾರರ ಜೀವನವು ಬಹಳ ನಿಗೂಢವಾಗಿ ಜೋಡಿಸಿಟ್ಟ ಖಾಲಿ ಡಬ್ಬಗಳಂತೆ. ಅವರು ಏನೇ ಮಾಡಿದರೂ, ಸ್ವಲ್ಪವೇ ಅಲುಗಾಡಿಸಿದರೂ ಒಂದರೊಳಗೊಂದು ಕಲಸಿ ಹೆಚ್ಚಿನವು ಮಿಶ್ರಣವಾಗುತ್ತವೆ. ಹಾಗಾಗಿಯೇ ಈ ಸಂದರ್ಶನದ ಮೇಲೆ ವಿಧಿಸಲಾದ ಆದೇಶವು ಇಲ್ಲಿಯವರೆಗೆ ಮುಕ್ತಾಗದೇ ಉಳಿದು ಬಂದಿದೆ ಮತ್ತು ಸದ್ಯಕ್ಕಿದು ಇಲ್ಲಿಯೇ ನಿಲ್ಲುತ್ತದೆ. ಇದ್ದಕ್ಕಿಂತ ಹೆಚ್ಚಿಗೇನೂ ಹೇಳಲಾರೆ.

●